ಬದುಕು ಒಂದು ಅಸಂಗತ. ಯುದ್ಧದ ಹೊಡೆತದಿಂದಾಗಿ ಅಂಥ ಅಭಿಪ್ರಾಯಗಳೆಲ್ಲ ಹುಟ್ಟಿಕೊಂಡವು. ಒಂಟಿತನ ಒಂದು 'ಇಗೋ' ಕೂಡ ಹುಟ್ಟಿಸಿಬಿಡ್ತು ಅವರಲ್ಲಿ. ಅದನ್ನ ತೆಗೆದುಕೊಂಡು ಬಂದು ಇಲ್ಲಿ ಇವರು ಏನೋ ಒಂದನ್ನು ಮಾಡಲಿಕ್ಕೆ ಹೊರಟರು – ಈ ನವ್ಯದವರು. ಸಮುದಾಯವನ್ನು ನೋಡಿ. ಚರಿತ್ರೆಯಲ್ಲಿ ಸಮುದಾಯಕ್ಕೆ ಒಂದು ಸಣ್ಣ ಸ್ಥಳವನ್ನೂ ಕೊಡಲಿಲ್ಲ. ಎಲ್ಲವೂ ವ್ಯಕ್ತಿ ವಿಶಿಷ್ಟ ಚಲನೆಗಳು. ಸಮುದಾಯ ಚರಿತ್ರೆಯ ಭಾಗವಾಗಲಿಲ್ಲ. ಸಮುದಾಯದ ಭಾಗವಾಗಿ ಬರೆಯುವ ಕವಿ, ಲೇಖಕ ಅದರ ಆಕ್ರಂದನವನ್ನು ಹೇಳುವ ಬರಹ ಮುಖ್ಯ. ಹಾಗಾಗಬೇಕಾದರೆ ಆತ ಅಥವಾ ಆಕೆ ತನ್ನ ವ್ಯಕ್ತಿ ವಿಶಿಷ್ಟ ಚಹರೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ನೋಡಿ, ನಮ್ಮ ಮೌಖಿಕ ಕಾವ್ಯ ಪರಂಪರೆಯಲ್ಲಿ ಕವಿಯೇ ಗೊತ್ತಿಲ್ಲ. ಆದರೂ ಕಾವ್ಯ ಕಾಡಲಿಕ್ಕೆ ಶುರುಮಾಡ್ತದೆ. ನವ್ಯದಲ್ಲಿ ವ್ಯಕ್ತಿ ಮುನ್ನೆಲೆಗೆ ಬಂದು ಸಮುದಾಯ ಹಿನ್ನೆಲೆಗೆ ಸರಿದಿತ್ತು. ಮೌಖಿಕ ಕಾವ್ಯದಲ್ಲಿ ಭಾಷೆ ಒಂದು ಸಂವಾದದ ಭಾಷೆಯಾಗಿ ಒದಗಿಬರ್ತದೆ. ನವ್ಯದಲ್ಲೇ ಸ್ವಗತದಂಥ ಅಭಿವ್ಯಕ್ತಿಗಳು ಹೆಚ್ಚಿಗೆ ಯಾಕೆ ಬಂದವು ಅನ್ನುವಂಥದ್ದು ಕೂಡ ಚರ್ಚೆ ಮಾಡಬೇಕಾಗಿದೆ. ಹಾಗೆ ಸಮುದಾಯದ ಭಾಷೆಯಾಗಿ ಸೃಜನಶೀಲ ಭಾಷೆ ಮೂಡದೇ ಇದ್ದರೆ, ಕವಿ ತನ್ನ ಇಗೋವನ್ನು ಕಳೆದುಕೊಳ್ಳದೇ ಇದ್ದರೆ ಸಮುದಾಯದ ಸೂಕ್ಷ್ಮಗಳನ್ನು ಹಿಡಿಯಲಿಕ್ಕೆ ಆಗೋದಿಲ್ಲ. ಚರಿತ್ರೆಯ ಆಚೆಗೆ ಇರುವ ಸಮುದಾಯ ಪ್ರಜ್ಞೆಯ ಜೊತೆಗೆ ಕವಿ ಹೆಜ್ಜೆಹಾಕಬೇಕಾಗುತ್ತದೆ. ಚಂದ್ರಶೇಖರ ಕಂಬಾರರ ಕಾವ್ಯ ಇಂಥ ಸಾಧನೆ ಮಾಡಿದೆ. ಸಮುದಾಯದ ಈ ಪ್ರಜ್ಞೆಯನ್ನು ಹಿಡಿದಿದೆ. ಕೆಲ ಕವಿತೆಗಳನ್ನು ಬಿಟ್ಟು. ಆ ಕೆಲ ಕವಿತೆಗಳು ಕೂಡ ನವ್ಯದ ಕೆಟ್ಟ ಪ್ರಭಾವಕ್ಕೆ ಒಳಗಾಗಿದ್ದರಿಂದ ಹೀಗಾಯಿತು. ತಮ್ಮ ಬಹುತೇಕ ಬರಹವನ್ನು ಸಮುದಾಯದ ಭಾಗವಾಗಿಯೇ ಕಂಬಾರರು ಕಟ್ಟಿದ್ದಾರೆ. ಊರಗೌಡ, ತಾಯಂದಿರು, ಕಾಡು, ಶಕುನಗಳು, ರಾಕ್ಷಸರು, ಆತಂಕಗೊಂಡ ಸಮುದಾಯ ಹೀಗೆ ಇಡೀ ಸಮುದಾಯವೇ ಅಲ್ಲಿ ಮಿಡಿಯುತ್ತಿದೆ. ಯಾವ ಕಾಲಕ್ಕೂ ದಕ್ಕದೇ ಇರುವ ಫಲಗಳನ್ನು ಸದಾ ಕಾಯುವ ಒಂದು ಸಮುದಾಯ ಅಲ್ಲಿದೆ. ಮಳೆ ಎಂದು ಬರುವುದೊ ಎಂದು ಕಾಯುವ ಸಮುದಾಯವಿದೆ. ಈ ಮಳೆಗೆ ಅನೇಕ ಅರ್ಥಗಳಿವೆ. ಇಂಥದ್ದೊಂದು ಸಮುದಾಯದ ಆತಂಕಗಳನ್ನು ವರ್ಣಿಸುವ ಕವಿ ಮೌಖಿಕ ಕಾವ್ಯದ ಅನೇಕ ಧಾತುಗಳನ್ನು ತನ್ನದಾಗಿ ಮಾಡಿಕೊಳ್ಳಬೇಕಾಗುತ್ತದೆ. ಕಂಬಾರತ್ವ ಅನ್ನೋದು ಅಲ್ಲಿ ಇಲ್ಲ. ಅದನ್ನು ಕಳಚಿಕೊಂಡ ಒಂದು ಕಾವ್ಯ ಅಲ್ಲಿದೆ. ಕಂಬಾರರು ಏನನ್ನ ಹೇಳ್ತಿದ್ದಾರೆ ಅಂತೆಲ್ಲ ಅಲ್ಲಿ ನೋಡೋಕಾಗಲ್ಲ. ಸಮುದಾಯವೊಂದರ ಧ್ವನಿ ಯಾವ ಭಾಷೆಯಲ್ಲಿ ಹೇಗೆಲ್ಲ ಮೂಡಿಬರ್ತಾ ಇದೆ ಅನ್ನೋದೆ ಅಲ್ಲಿ ಮುಖ್ಯವಾದದ್ದು. ಆದರೆ, ಇಲ್ಲಿ ಮತ್ತೆ ಬೇಂದ್ರೆ ಬೇರೆ ತರಹದ ಕವಿ. ಅವರು ಜನಪದದ ಶೈಲಿ ತಗೊಂಡಿದ್ದಾರೆ. ಮಟ್ಟು ತಗೊಂಡಿದ್ದಾರೆ. ಆದರೆ, ಅವರು ಶುದ್ಧ ವ್ಯಕ್ತಿ ವಿಶಿಷ್ಟ ಕವಿ. ಅವರ ಕಾವ್ಯ ಭಾಷೆ ವ್ಯಕ್ತಿ ವಿಶಿಷ್ಟವಾದದ್ದು. ಅಲ್ಲಿರುವುದು ಒಂದು ಗಂಡು ಮತ್ತು ಹೆಣ್ಣಿನ ಭಾಷೆ, ಸಖ–ಸಖಿಯ ಭಾಷೆ. ನೀವು ಯಾವುದೇ ಕವಿತೆಯನ್ನು ನೋಡಿ. ಅದನ್ನು ಪ್ರತಿಯೊಬ್ಬನು ತನ್ನವರೆಗೆ ವಿಸ್ತರಿಸಿಕೊಳ್ಳಬಹುದು, ನಿಮ್ಮ ತನಕ. ಅರೆ, ನನ್ನ ದುಃಖದ ತರಹವೇ ಇದೆಯಲ್ಲ ಅಂತ. ಅದು ಬೇರೆ ಮಾತು. ಆದರೆ, ಕಂಬಾರರ ಕಾವ್ಯ ಭಾಷೆ ಕುರಿತು ಹೀಗೆ ಹೇಳಲಿಕ್ಕಾಗುವುದಿಲ್ಲ. ಅದು ಬದುಕಿನ ಕಥನ, ಸಮುದಾಯದ ಕಥನ. ಎದುರಿನವರನ್ನು ಒಳಗೊಂಡು ಇದು ನಿಮಗೆ ಗೊತ್ತಿರುವ ಕಥೆ, ಇದನ್ನು ಇನ್ನೊಮ್ಮೆ ನಿಮಗೆ ಕಥೆ ಮಾಡಿ ಹೇಳ್ತಾ ಇದ್ದೀನಿ ಅನ್ನೋ ಥರದ ಕಥನವದು. ಸಮುದಾಯದ ಕಥನವೇ ಇವರ ಭಾಷೆಯಾಗಿದೆ. ಈ ತರಹದ ಒಂದು ಭಾಷೆಗೆ ದೊಡ್ಡದಾದುದನ್ನು ಹಿಡಿಯಲು ಸಾಧ್ಯ. ಈ ತರಹದ ಭಾಷೆ ನಮ್ಮ ಸಾಹಿತ್ಯಕ್ಕೆ ಬೇಕು.

◆ **ಈಗ ಕನ್ನಡ ವಿಮರ್ಶೆಗೆ ಬೇಕಾದ ಹೊಸ ತಾತ್ವಿಕತೆಗಳು ಯಾವುವು? ಅವುಗಳನ್ನು ಕನ್ನಡ**